# ಸ್ವಾಮಿ ಪರಮೇಶಾನಂದ (೧೯೦೪-೧೯೮೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ಶ್ರೀಮಾತೆಯವರ ಶಿಷ್ಯರಾಗಿದ್ದ ಸ್ವಾಮಿ ಪರಮೇಶಾನಂದರು (ಧರಣಿ ಮಹಾರಾಜ್) ಶರತ್ ಮಹಾರಾಜರ ದೂರದ ಸಂಬಂಧಿಕರು. ಮಹಾರಾಜರು ನನಗೆ ಹಳೆಯ ಸ್ಮೃತಿಗಳನ್ನು ಹೇಳುತ್ತಿದ್ದರು.

### ೧೮.೦೮.೧೯೮೩, ಕಾಶಿ ಅದ್ವೈತ ಆಶ್ರಮ

ಮಹಾರಾಜರು ಪ್ರತಿದಿನ ಸಾಯಂಕಾಲ ಸೇವಾಶ್ರಮದ ಅಂಗಳವನ್ನು ಕೆಲವು ಬಾರಿ ಸುತ್ತಿ ಬಂದು, ಬಳಿಕ ಗೆಸ್ಟ್ ಹೌಸಿನ ಮೆಟ್ಟಿಲ ಮೇಲೆ ಕುಳಿತುಕೊಳ್ಳುತ್ತಿದ್ದರು. ''ಮಹಾರಾಜ್, ನೀವು ಪ್ರತಿದಿನವೂ ಹೀಗೆ ತಿರುಗಾಡುತ್ತೀರಾ?'' ಎಂದು ಕೇಳಿದಾಗ ಅವರೆಂದರು, ''ಹ್ಞಂ, ದಿನಾ ತಿರುಗಾಡುತ್ತೇನೆ, ನೋಡು, ಅಭ್ಯಾಸ ಬಿಟ್ಟುಬಿಟ್ಟರೆ ಮತ್ತೆ ಸಾಧ್ಯವಾಗುವುದಿಲ್ಲ.'

ಸಂಭಾಷಣೆಯ ನಡುವೆ ಅವರೆಂದರು, ''ಕಿಶೋರಿ ಮಹಾರಾಜರ (ಪರಮೇಶ್ವರಾನಂದ) ಸಂನ್ಯಾಸಕ್ಕಾಗಿ ಶ್ರೀಮಾತೆಯವರು ಶಿವರಾತ್ರಿಯ ಮರುದಿನ ಪತ್ರವೊಂದನ್ನು ಬರೆದುಕೊಟ್ಟು ಅವರನ್ನು ಬೇಲೂರು ಮಠದಲ್ಲಿದ್ದ ರಾಜಾ ಮಹಾರಾಜರ ಬಳಿ ಕಳುಹಿಸಿದರು. ಪತ್ರದ ಮರ್ಮವನ್ನು ತಿಳಿದ ಬಾಬುರಾಮ ಮಹಾರಾಜರು, 'ಇದೇನಿದು! ನೀನು ಹೈಕೋರ್ಟ್‌ನಿಂದ ಪತ್ರ ಬರೆಸಿ ತಂದಿರುವೆಯಲ್ಲ!' ಎಂದರು. ಕಿಶೋರಿ ಮಹಾರಾಜರು ಉತ್ತರಿಸಿದರು, 'ಮಹಾರಾಜ್, ನನಗೇನೂ ಗೊತ್ತಿಲ್ಲ. ಶ್ರೀಮಾತೆಯವರು ಈ ಪತ್ರವನ್ನು ನನ್ನೊಂದಿಗೆ ಕಳುಹಿಸಿರುವರು.' ಸಂನ್ಯಾಸ ದೀಕ್ಷೆಯ ಬಳಿಕ ಶ್ರೀಮಾತೆಯವರು ಹೇಳಿದ್ದರು, 'ಮಗು, ನಿನಗೆ ಮೃತ್ಯುಯೋಗವಿತ್ತು. ಸಂನ್ಯಾಸ ಪಡೆದರೆ ಹೊಸ ಜನ್ಮ ಪಡೆದಂತೆ. ಮೃತ್ಯುಯೋಗವನ್ನು ತಪ್ಪಿಸಲೆಂದೇ ನಿನಗೆ ಸಂನ್ಯಾಸವನ್ನು ಪಡೆಯಲು ಹೇಳಿದೆ.' ಕಿಶೋರಿ ಮಹಾರಾಜರು ಈ ಘಟನೆಯನ್ನು ತಾವೇ ನನಗೆ ಹೇಳಿದ್ದರು.''

'' 'ಜನ್ಮ-ಮೃತ್ಯು-ವಿವಾಹ — ಈ ಮೂರೂ ದೇವರ ಕೈಯಲ್ಲಿ' ಎಂದು ಶ್ರೀಮಾತೆಯವರು ಹೇಳುತ್ತಿದ್ದರು. ಒಬ್ಬ ಶಿಷ್ಯನಿಗೆ ಮೂರು ವಿವಾಹಗಳ ಯೋಗವಿತ್ತು. ಠಾಕೂರರು ಇದನ್ನು ಕತ್ತರಿಸಿದರು. ಠಾಕೂರರ ಕೃಪೆಯಿಂದ ಕರ್ಮಫಲ, ಪ್ರಾರಬ್ಧಗಳು ಕಳೆಯುವುವು.

''ಜಪಧ್ಯಾನಗಳು ಗಾಢವಾಗದಿದ್ದರೆ ಅದರಿಂದೇನೂ ಪ್ರಯೋಜನವಿಲ್ಲ. ಸಿದ್ಧಮಂತ್ರವು ಸುಡುಮದ್ದಿನಂತೆ ಒಳಗಿನದನ್ನು ಸುಟ್ಟುಹಾಕುತ್ತದೆ. ಬಹುಕಾಲದಿಂದಲೂ ಜಪಧ್ಯಾನ ಮಾಡುತ್ತಿದ್ದರೂ ಅಂತರಂಗದಲ್ಲಿ ಇಷ್ಟದೇವತೆಯ ದರ್ಶನವಾಗಿಲ್ಲವೆಂದರೆ ಜಪಧ್ಯಾನಗಳು ಸರಿಯಾಗಿ ನಡೆಯುತ್ತಿಲ್ಲವೆಂದೇ ಅರ್ಥ. ಮಲಗಿಕೊಂಡು ಸ್ಮರಣ-ಮನನವನ್ನು ಮಾಡಬಹುದು; ಜಪಧ್ಯಾನವನ್ನು ಮಾಡಲಾಗದು. ತೀವ್ರ ಪುರುಷಕಾರವನ್ನವಲಂಬಿಸಿ ಪ್ರತಿದಿನವೂ ಜಪಧ್ಯಾನವನ್ನು ಮಾಡಲು ಕುಳಿತುಕೊಳ್ಳಬೇಕು.

''ವಿಜ್ಞಾನ ಮಹಾರಾಜರು ಸ್ವತಃ ಈ ಘಟನೆಯನ್ನು ಹೇಳಿದರು — ಒಂದು ದಿನ ಠಾಕೂರರು ವಿಜ್ಞಾನ ಮಹಾರಾಜರ ಬಳಿಸಾರಿ ಹೀಗೆ ಹೇಳಿದರು: 'ಪೇಶನ್, ನೀನು ಆಕೆಯ (ಶ್ರೀಮಾತೆಯವರ) ಬಗ್ಗೆ ಸ್ವಲ್ಪ ಮಾತನಾಡು. ನೀನು ಕೇವಲ ನನ್ನ ವಿಚಾರವಾಗಿ ಮಾತ್ರವೆ ಮಾತನಾಡುತ್ತೀಯಲ್ಲ! ಆಕೆಯ ಬಗ್ಗೆ ಹೇಳದಿದ್ದರೆ ಜನರು ಮುಕ್ತಿಯನ್ನು ಹೇಗೆ ತಾನೆ ಪಡೆಯುವರು? ಆಕೆ ಮುಕ್ತಿದಾತೆ.' ಈ ಘಟನೆಯ ಬಳಿಕ ವಿಜ್ಞಾನ ಮಹಾರಾಜರು ಠಾಕೂರ್ ಹಾಗೂ ಶ್ರೀಮಾತೆಯವರ ಮಂತ್ರಗಳನ್ನು ಮಂತ್ರದೀಕ್ಷೆಯಲ್ಲಿ ಉಪದೇಶಿಸುತ್ತಿದ್ದರು.''

### ೨೭.೦೮.೧೯೮೩, ಕಾಶಿ ಅದ್ವೈತ ಆಶ್ರಮ

ಮಹಾರಾಜರು ಹೇಳಿದರು: ''ನಾಮಿಯ ಬಗ್ಗೆ ಎಷ್ಟು ಚಿಂತಿಸಿದರೆ ಅಷ್ಟು ಆತನ ಶಕ್ತಿಯು ನಮ್ಮೊಳಗೆ ಪ್ರವೇಶಿಸುವುದು. ಠಾಕೂರು ಎಷ್ಟು ಭಾವಗಳನ್ನು ತಳೆದು ನಿನ್ನೊಳಗಿಂದ ಕೆಲಸ ಮಾಡುವರೆಂದು ನೀನು ಆಗ ನೋಡುವೆ.

''ಮಹೇಂದ್ರನಾಥ ದತ್ತ ಹೇಳಿದ್ದರು.'ಸ್ವಾಮೀಜಿಯವರ ಕೃತಿಗಳನ್ನು ಪುನಃ ಪುನಃ ಓದು. ಅರ್ಥವಾಗದಿದ್ದರೆ ಅವುಗಳನ್ನು ಮತ್ತೆ ಮತ್ತೆ ಓದು. ಹೀಗೆ ಓದುವುದೇ ಧ್ಯಾನ. ಹೀಗೆ ಮಾಡಿದರೆ ಎಲ್ಲವೂ ಸ್ಪಷ್ಟವಾಗಿ ತಿಳಿಯುತ್ತದೆ.'

''ಪ್ರಭು ಮಹಾರಾಜರ (ಸ್ವಾಮಿ ವೀರೇಶ್ವರಾನಂದರು) ಶಿಷ್ಯರೊಬ್ಬರು ಮಂತ್ರವನ್ನು ಪಡೆದರು. ಆದರೆ ಮಹಾರಾಜರು ಮಂತ್ರವನ್ನು ಹೇಳಿದಾಗ ಸರಿಯಾಗಿ ಕೇಳಿಸದಿದ್ದ ಕಾರಣ ತಪ್ಪು ಮಂತ್ರವನ್ನೇ ಉಚ್ಚರಿಸುತ್ತಿದ್ದರು. ಒಂದು ದಿನ ಶ್ರೀಮಾತೆಯವರು ಸ್ವಪ್ನದರ್ಶನವನ್ನು ನೀಡಿ, ಮಂತ್ರವನ್ನು ಶುದ್ಧೀಕರಿಸಿಕೊಟ್ಟರು. ಒಬ್ಬ ಜ್ಯೋತಿರ್ಮಯ ಸ್ತ್ರೀಮೂರ್ತಿಯು 'ನೀನು ಮಂತ್ರವನ್ನು ನನಗೆ ಹೇಳು' ಎಂದಾಗ 'ಇಲ್ಲ ಮಂತ್ರವನ್ನು ಯಾರಿಗೂ ಹೇಳುವಂತಿಲ್ಲ' ಎಂದರವರು. 'ನನಗೆ ಹೇಳಬಹುದು' ಎನ್ನುತ್ತ ಶ್ರೀಮಾತೆಯವರು ತಾವೇ ಮಂತ್ರವನ್ನು ಸ್ಪಷ್ಟವಾಗಿ ಉಚ್ಚರಿಸಿ, ಶುದ್ಧ ಮಂತ್ರವನ್ನು ಅವರಿಗೆ ನೀಡುತ್ತ ಸಮಸ್ವರದಲ್ಲಿ ಹೇಳಲು ಹೇಳಿದರು.''